# ಪಂಡಿತ್ ಜನರಲ್ ಲೈಬ್ರರಿ

ಶಿರಸಿಯ ಹಳೇ ಬಸ್ ನಿಲ್ದಾಣದ ಎದುರು ಒಂದು ಗ್ರಂಥಾಲಯವಿದೆ. ಅದರ ಹೆಸರು 'ಪಂಡಿತ್ ಜನರಲ್ ಲೈಬ್ರರಿ'. ಭರ್ತಿ 25 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಹೊಂದಿರುವ ಈ ಗ್ರಂಥಾಲಯಕ್ಕೀಗ 154 ವರ್ಷ. ಬಸ್ ನಿಲ್ದಾಣದ ಹೊಸ ಕಟ್ಟಡ ನಿರ್ಮಾಣ ಕಾರ್ಯದಿಂದ ಈ ಗ್ರಂಥಾಲಯವೂ ಇತಿಹಾಸ ಸೇರಲಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ. ಲಕ್ಷಾಂತರ ಜನರ ಜ್ಞಾನದ ತೃಷೆಯನ್ನು, ಓದಿನ ಹಸಿವನ್ನು ನೀಗಿಸಿದ ಈ ಗ್ರಂಥಾಲಯವನ್ನು ಗೌರವದ ದ್ಯೋತಕವಾಗಿ ಕಾಣಬಹುದು.

1870ರಲ್ಲಿ ಆಗಿನ ಕಂದಾಯ ಇಲಾಖೆಯ ಸಿಬ್ಬಂದಿಗಳು ಸಂಗ್ರಹಿಸಿದ ಸುಮಾರು 300 ಪುಸ್ತಕಗಳಿಂದ ಈ ಗ್ರಂಥಾಲಯ ಆರಂಭಗೊಂಡಿತು. ಆ ಬಳಿಕ ಮತ್ತೊಂದು ಕಟ್ಟಡವನ್ನು ನಿರ್ಮಿಸಲಾಯಿತು. ಈ ಕಟ್ಟಡದ ಮಹಡಿಯ ಮೇಲೆ ಶಿರಸಿಯ ಬಾರ್ ಕೌನ್ಸಿಲ್ ಹಾಗೂ ಆರಂಭದ ದಿನಗಳಲ್ಲಿ ಶಿರಸಿಯ ರೋಟರಿ ಕ್ಲಬ್ ಕೂಡ ಕಾರ್ಯನಿರ್ವಹಿಸಿದೆ. ಈ ವಾಚನಾಲಯದ ವಿಚಾರವಾಗಿ ಇಬ್ಬರನ್ನು ನೆನೆಯಲೇಬೇಕು. ಅದುವೇ ಕಟ್ಟಡ ನಿರ್ಮಿಸಿಕೊಟ್ಟ ರಾವ್ ಬಹಾದ್ದೂರ್ ಪುಂಡಲೀಕರಾವ್ ಪಂಡಿತ ಹಾಗೂ ಬಹಳ ವರ್ಷ ಇಲ್ಲಿ ಲೈಬ್ರರಿಯನ್ ಆಗಿ ಕೆಲಸ ಮಾಡಿದ್ದ ವಾರಿಜಾಕ್ಷ ಆಚಾರ್ಯರು. ರವೀಂದ್ರನಾಥ




ಟ್ಯಾಗೋರ್ ಅವರ ಹಸ್ತಾಕ್ಷರ ಇರುವ 'ಗೋಲ್ಡನ್ ಬುಕ್ ಆಫ್ ಟ್ಯಾಗೋರ್' ಎನ್ನುವ ಅಪರೂಪದ ಪುಸ್ತಕವೂ ಈ ಲೈಬ್ರರಿಯಲ್ಲಿದೆ. ಈ ಪುಸ್ತಕ ನೋಡಲು ರಾಜ್ಯದ ಅನೇಕ ಹಿರಿಯ ಸಾಹಿತಿಗಳು ಗ್ರಂಥಾಲಯಕ್ಕೆ ಭೇಟಿ ನೀಡಿ ಷರಾ ಬರೆದಿದ್ದಾರೆ. ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ಗ್ರಂಥಾಲಯವನ್ನು ಹಿರಿಮೆಗಾದರೂ ಉಳಿಸಿಕೊಳ್ಳುವ ಅವಶ್ಯಕತೆ ಇದೆ.

–ಜಿ.ಎಂ. ಬೊಮ್ನಳ್ಳಿ




# ಮೊಹರಂ ಹಬ್ಬದ ಡೋಲಿ

ಬಾಗಲಕೋಟೆಯ ಬಾದಾಮಿ ತಾಲ್ಲೂಕಿನ ಚಿರ್ಲಕೊಪ್ಪದಲ್ಲಿ ಈ ಬಾರಿಯ ಮೊಹರಂ ನಿಮಿತ್ತವಾಗಿ ತಯಾರಿಸಿದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿರುವ ಡೋಲಿ ಕಣ್ಮನ ಸೆಳೆಯಿತು. ಬಣ್ಣದ ಹಾಳೆಗಳಿಂದ ಅಲಂಕಾರಗೊಂಡಿದ್ದ ಈ ಡೋಲಿಗೆ ಶತಮಾನದ ಇತಿಹಾಸವಿದೆ. ರಟ್ಟಿನಿಂದ ಮಾಡಿರುವ ಈ ಡೋಲಿಯನ್ನು ಮಿಣ ಮಿಣ ಮಿಂಚುವ ಬಣ್ಣ ಬಣ್ಣದ ಹಾಳೆಗಳಿಂದ ರೂಪಿಸಲಾಗಿದೆ. ಡೋಲಿಯನ್ನು ಮೊಹರಂ ಕೊನೆಯ ದಿನ ಹೆಗಲ ಮೇಲಿಟ್ಟುಕೊಂಡು ಕುಣಿಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಈ ಭಾಗದಲ್ಲಿ ಡೋಲಿ ಮೊಹರಂ ಹಬ್ಬದ ಕೇಂದ್ರಬಿಂದುವಾಗಿ ಗುರುತಿಸಿಕೊಂಡಿದೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ

# ನಾಯಿಗಳ ಸಮುದ್ರ ಸ್ನಾನ

ಈಚೆಗೆ ಬಾಲಿ ಪ್ರವಾಸ ಮಾಡಿದ್ದೆ. ಅಲ್ಲಿ ಕೂಟಾ ಎಂಬ ಪ್ರದೇಶವಿದ್ದು, ಅದೇ ಜಾಗದ ಹೋಟೆಲ್‌ನಲ್ಲಿ ನಾವು ತಂಗಿದ್ದೆವು. ಹತ್ತಿರದಲ್ಲೇ ಸಮುದ್ರತೀರವಿತ್ತು. ಬೆಳಿಗ್ಗೆ ವಾಯುವಿಹಾರಕ್ಕೆಂದು ಹೋದೆ. ಕೆಲವು ಬೀಡಾಡಿ ನಾಯಿಗಳು ಅಲ್ಲಿ ಚಿನ್ನಾಟವಾಡುತ್ತಿದ್ದವು. ಅದನ್ನು ಕಂಡು ನನಗೆ, ಘಟ್ಟದ ಮೇಲಿನವರಿಗೆ ಘಟ್ಟದ ಕೆಳಗಿನ ಜಲಪಾತಗಳು, ನದಿ ಹರಿವು, ಕೆರೆಗಳು, ಸಮುದ್ರಗಳನ್ನು ಕಂಡಾಕ್ಷಣ ಓಡಿಹೋಗಿ ನೀರಿಗೆ ಬೀಳುವುದೇ ನೆನಪಾಯಿತು. ಚಿನ್ನಾಟವಾಡುತ್ತಿದ್ದ ನಾಯಿಗಳ ಪೈಕಿ ಒಂದು ನಾಯಿ ಸೀದಾ ಸಮುದ್ರದೊಳಗೆ ಹೋಗಿ ಅಲೆಗಳೊಂದಿಗೆ ಆಟವಾಡಿ ಮತ್ತೆ ತೇಲಿಕೊಂಡು ಆಚೆ ಬಂತು. ಅದೆಲ್ಲವನ್ನೂ ಕುತೂಹಲದಿಂದ ಗಮನಿಸಿದೆ.

ಎಲ್ಲಾ ನಾಯಿಗಳೂ ಸಮುದ್ರದ ದಂಡೆಯಲ್ಲಿನ ಮರಳಿನ ಮೇಲೆ ಬಿದ್ದು ಹೊರಳಾಡಿ ನಂತರ ಸಮುದ್ರದ ಅಲೆಗಳ ಒಳಹೊಕ್ಕು ಆಟವಾಡಿ ಸಂಭ್ರಮಿಸುವುದನ್ನು ನೋಡಿ, 'ನಾಯಿಗಳು ಸಮುದ್ರ ಸ್ನಾನ ಮಾಡುತ್ತವೆ' ಎಂದು ಅನಿಸಿತು. ಪ್ರಾಯಶಃ ದಿನನಿತ್ಯ ಸಹಸ್ರಾರು ಪ್ರವಾಸಿಗರು ಸಮುದ್ರ ಸ್ನಾನ ಮಾಡಿ ಸಂಭ್ರಮಿಸುವುದನ್ನು ನೋಡಿ ಈ ನಾಯಿಗಳೂ ಅದನ್ನೇ ಕಲಿತಿರಬಹುದು. ಪ್ರವಾಸಿಗರ ಸಂಖ್ಯೆ ಕಡಿಮೆ ಇರುವ ಮುಂಜಾನೆ ಹೊತ್ತು ಈ ಭಾಗದಲ್ಲಿ ನಾಯಿಗಳು ಸಮುದ್ರ ಸ್ನಾನಕ್ಕೆ ಇಳಿಯುತ್ತವೆ. ಅದೇನೆ ಇರಲಿ ನಾಯಿಗಳ ಚಿನ್ನಾಟದ ಈ ಸಮುದ್ರ ಸ್ನಾನ ಪ್ರಶಾಂತ ಮುಂಜಾವಿನ ನಡಿಗೆಯನ್ನು ಉಲ್ಲಸಿತಗೊಳಿಸಿ ಮನಸ್ಸಿಗೆ ಮುದ ನೀಡಿತು.

–ಎಚ್.ಎಸ್. ನಂದಕುಮಾರ್, ಮಂಗಳೂರು

